(ಸಾಕ್ಷಿಗೆ ದಿನಾಂಕ: 10.07.2024 ರಂದು ಪ್ರಮಾಣ ವಚನ ಬೋಧಿಸಲಾಯಿತು)

**ಮುಂದುವರೆದ ಮುಖ್ಯ ವಿಚಾರಣೆಃ ಶ್ರೀ ಕೆ.ಆರ್., ಪ್ರತಿವಾದಿಗಳ ಪರ ವಕೀಲರಿಂದಃ**

ನನ್ನ ಮುಂದುವರೆದ ಮುಖ್ಯ ವಿಚಾರಣೆಯಾಗಿ ಮಧ್ಯಂತರ ಅರ್ಜಿಯೊಂದಿಗೆ ದಾಖಲೆಗಳನ್ನು ಹಾಜರುಪಡಿಸುತ್ತಿದ್ದು, ಮೂಲ ದಾವೆ ಸಂಖ್ಯೆ 88/2017ರಲ್ಲಿ PW-1 ಇವರ ದಿನಾಂಕಃ 05.01.2022, 05.07.2022 ಮತ್ತು 07.07.2022ರ ಸಾಕ್ಷ್ಯದ ದೃಢೀಕೃತ ನಕಲನ್ನು ನಿ.ಡಿ.61 ಎಂದು ಗುರುತಿಸಲಾಯಿತು. ಸದರಿ ದಾವೆಯಲ್ಲಿ 1 ರಿಂದ 5ನೇ ಪ್ರತಿವಾದಿಯರು ಸಲ್ಲಿಸಿದ ತಿದ್ದುಪಡಿ ಪ್ರತಿವಾದ ಪತ್ರದ ದೃಢೀಕೃತ ನಕಲನ್ನು ನಿ.ಡಿ.62 ಎಂದು ಹಾಗೂ ಸದರಿ ದಾವೆಯಲ್ಲಿ ದಿನಾಂಕಃ 27.09.2022ರಂದು 1 ರಿಂದ 5ನೇ ಪ್ರತಿವಾದಿಯರು ಸಲ್ಲಿಸಿದ ಜ್ಞಾಪನವನ್ನು ನಿ.ಡಿ.63 ಎಂದು ಗುರುತಿಸಲಾಯಿತು.

ನಿ.ಡಿ.1ರಂತೆ ನಿಶಾನೆಯಾಗಿರುವ 9 ಫೋಟೋಗಳು ಈ ದಾವೆಯ ದಾವಾ ಸ್ವತ್ತು ಮತ್ತು ಮೂಲ ದಾವೆ ಸಂಖ್ಯೆ 88/2017ರ ದಾವಾ ಸ್ವತ್ತಿನದ್ದು ಆಗಿರುತ್ತವೆ. ದಾವಾ ಸ್ವತ್ತಿನಲ್ಲಿ ನಾವು ಮನೆ ಮತ್ತು ಷೆಡ್ ನಿರ್ಮಿಸಿ 2000ನೇ ಸಾಲಿನಿಂದ ವಾಸ ಮಾಡುತ್ತಿದ್ದೇವೆ.

ನಿ.ಡಿ.49 ಫೋಟೋದಲ್ಲಿರುವ ಮನೆ ಸದ್ಯ ನಾನು ವಾಸ ಮಾಡುತ್ತಿರುವ ವಾಸದ ಮನೆಯಾಗಿರುತ್ತದೆ. ನಿ.ಡಿ.50 ಫೋಟೋದಲ್ಲಿ ಕಾಣಿಸುತ್ತಿರುವ ಮನೆಯಲ್ಲಿ ವಾದಿ ವಾಸ ಮಾಡುತ್ತಿದ್ದಾರೆ. ನಿ.ಡಿ.51 ಫೋಟೋದಲ್ಲಿ ಕಾಣಿಸುತ್ತಿರುವ ಮನೆ ವಾದಿ ನಿರ್ಮಿಸಿದ ಹೊಸ ಮನೆಯ ಫೋಟೋ ಆಗಿರುತ್ತದೆ. ನಿ.ಡಿ.52 ಫೋಟೋದಲ್ಲಿ ವಾದಿಗೆ ಸಂಬಂಧಿಸಿದ ಅಡಿಕೆ ಷೆಡ್ ಮತ್ತು ಕಣವಾಗಿರುತ್ತದೆ. ಸದರಿ ಕಣದಲ್ಲಿ ನಿಂತಿರುವ ಟ್ರಾಕ್ಟರ್ ವಾದಿಯ ಟ್ರಾಕ್ಟರ್ ಆಗಿರುತ್ತದೆ. ನಿ.ಡಿ.52 ಫೋಟೋದಲ್ಲಿ ಕಾಣಿಸುತ್ತಿರುವ ಕಣದಲ್ಲಿರುವ ಅಡಿಕೆ ವಾದಿಗೆ ಸೇರಿರುತ್ತದೆ. ನಿ.ಡಿ.53

ಮತ್ತು 54 ಫೋಟೋಗಳು ವಾದಿಗೆ ಸೇರಿದ ಅಡಿಕೆ ಷೆಡ್ ಮತ್ತು ಕಣವಾಗಿರುತ್ತದೆ.

***ಆದ್ದುದರಿಂದ ನಾನು ಕೋರಿರುವಂತೆ ವಾದಿ ದಾವೆಯನ್ನು ವಜಾ ಮಾಡಬೇಕೆಂದು ಪ್ರಾರ್ಥಿಸುತ್ತೇನೆ.***

ಪಾಟೀ ಸವಾಲುಃ ಶ್ರೀ ಬಿ.ಜಿ.ಆರ್., ವಾದಿಗಳ ಪರ ವಕೀಲರಿಂದಃ

ಸಮಯಾವಕಾಶವನ್ನು ಕೇಳಿದ್ದು, ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಗಿದೆ.)

ಓ.ಹೇ.ಕೇ. ಸರಿ ಇದೆ

ಸಹಿ/-
ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ,
ಕುಣಿಗಲ್.